ಅಸಲುದಾವಾ ಸಂಖ್ಯೆ **251/2021**
**ಪಿ.ಡಬ್ಲ್ಯೂ.1**

ಇಂದು ದಿನಾಂಕ **11-07-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಉಳಿದ ವಾದಿಯರು ಈ ದಾವೆ ನಡೆಸಲು ನನಗೆ ಮುಕ್ತಿಯಾರ ಪತ್ರ ನೀಡಿರುತ್ತಾರೆ, ಆದರೆ ನಾನು ಅದನ್ನು ಹಾಜರುಪಡಿಸಿಲ್ಲಾ. ಕಳೆದ **30** ವರ್ಷಗಳಿಂದ ಪ್ರತಿವಾದಿ ದಾವಾ ಆಸ್ತಿಯಲ್ಲಿ ಇರುತ್ತಾರೆ. **1979** ರಲ್ಲಿ ಪ್ರತಿವಾದಿ ದಾವಾ ಆಸ್ತಿಗೆ ಬಂದಿರುತ್ತಾರೆ ಎಂದರೆ ನಿಜ. ಆ ಸಮಯದಲ್ಲಿ ನಾನಾಗಲೀ ನನ್ನ ತಂದೆಯಾಗಲೀ ದಾವಾ ಆಸ್ತಿಯ ಮಾಲೀಕರು ಆಗಿರಲಿಲ್ಲಾ ಹಾಗೂ ಜೈನ ಎನ್ನುವ ಸಹೋದರರು ದಾವಾ ಆಸ್ತಿಯ ಮಾಲೀಕರು ಆಗಿದ್ದರು ಎಂದರೆ ನಿಜ. ಸದರೀ ಜೈನ ರವರು ಸಂಪೂರ್ಣ ಕಟ್ಟಡ ಮತ್ತು ಜಾಗೆಯನ್ನು ನನ್ನ ತಂದೆ ಮತ್ತು ಅವರ ಸಹೋದರರಿಗೆ ಮಾರಾಟ ಮಾಡಿರುತ್ತಾರೆ. ಡಿ ಆರ್ ಜೈನರವರು ತನ್ನ ಅರ್ಧ ಹಿಸ್ಸೆಯನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನಿಜ. ನನ್ನ ತಂದೆ ತನ್ನ ಅರ್ಧ ಹಿಸ್ಸೆಯನ್ನು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. **1997** ರಲ್ಲಿ ಬಿ ಆರ್ ಜೈನ ರವರ ಅರ್ಧ ಹಿಸ್ಸೆ ಮತ್ತು ನನ್ನ ತಂದೆಯ ಅರ್ಧ ಹಿಸ್ಸೆ ಆಸ್ತಿಯನ್ನು ಖರೀದಿಸಿದ ನಂತರದಿಂದ ಪ್ರತಿವಾದಿ ನಮಗೆ ಭಾಡಿಗೆ ಕೊಡುವುದನ್ನು ನಿಲ್ಲಿಸಿದರು ಎಂದರೆ ಸರಿಯಲ್ಲಾ. ಪ್ರತಿವಾದಿ ನಂತರವೂ ಸಹ ಭಾಡಿಗೆ ನೀಡುತ್ತಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲಾ.

ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದ ಸ್ವಲ್ಪ ದಿನಗಳ ನಂತರ ನನ್ನ ತಂದೆಗೆ ಆರೋಗ್ಯ ಸರಿಇರಲಿಲ್ಲಾ ಎಂದರೆ ನಿಜ. ನಮ್ಮ ಆಸ್ತಿಯ ಅಳತೆಯನ್ನು ನಾವು **2016** ರಲ್ಲಿ ಮಾಡಿಸಿರುತ್ತೆವೆ. ನಮ್ಮ ತಂದೆ ಮೃತಪಟ್ಟು ಅವರ ಮಕ್ಕಳಾದ ನಮ್ಮ ಎಲ್ಲರ ಹೆಸರುಗಳು ಆಸ್ತಿಗೆ ದಾಖಲಾದ ನಂತರ ನಾವು ಅಳತೆ ಮಾಡಿಸಿರುತ್ತೇವೆ ಎಂದರೆ ನಿಜ.

ನನ್ನ ತಂದೆ ಪ್ರತಿವಾದಿಗೆ ಬರೆದುಕೊಟ್ಟ  ಖರೀದಿ ಪತ್ರದಲ್ಲಿ ಕೆಲವು ತಪ್ಪುಗಳು ಆಗಿದ್ದ ಕಾರಣ ಸದರೀ ತಪ್ಪುಗಳನ್ನು ಸರಿಪಡಿಸಿ ಇನ್ನೊಂದು ಪತ್ರ ಬರೆದುಕೊಡುವುದಾಗಿ ಒಪ್ಪಿಕೊಂಡು ನನ್ನ ತಂದೆ ಪ್ರತಿವಾದಿಗೆ ಒಪ್ಪಿಗೆ ಪತ್ರವನ್ನು ನೋಟರಿಯವರ ಮುಂದೆ ಬರೆದುಕೊಟ್ಟಿದ್ದರು ಎನ್ನುವುದು ಸರಿಯಲ್ಲಾ. ದಿಃ **26-02-2020** ರಂದು ಪ್ರತಿವಾದಿಯು ಸದರೀ ಒಪ್ಪಿಗೆ ಪತ್ರವು ತನಗೆ ಸಿಕ್ಕಿರುವುದಾಗಿ ಅದರಂತೆ ತಿದ್ದುಪಡಿ ಪತ್ರ ಬರೆದುಕೊಡುವಂತೆ ನಮಗೆ ಅಂದರೆ ವಾದಿಯರಿಗೆ ನೋಟಿಸು ನೀಡಿದ್ದರು ಎಂದರೆ ನಿಜ. ಸದರೀ ನೋಟಿಸಿಗೆ ನಾವು ಉತ್ತರ ನೀಡಿಲ್ಲಾ ಎಂದರೆ ನಿಜ. ನಂತರ ನಾವು ಸಿಟಿ ಸರ್ವೆಯರನಿಂದ ಆಸ್ತಿಯನ್ನು ಅಳತೆ ಮಾಡಿಸಿದ್ದು ಅದರ ಮೇಲೆ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಿಜ. ಸದರೀ ಮೇಲ್ಮನವಿ ಪ್ರತಿವಾದಿಯ ಖರೀದಿ ಪತ್ರದಲ್ಲಿ ತಪ್ಪುಗಳು ಸರಿಪಡಿಸದೇ ಇರುವ ಕಾರಣದಿಂದ ವಜಾಮಾಡಲ್ಪಟಿತು ಎಂದರೆ ನಿಜ. ಪ್ರತಿವಾದಿಯ ಖರೀದಿ ಪತ್ರದಲ್ಲಿ ತಪ್ಪುಗಳು ಆಗಿರುವ ವಿಷಯ ಗೊತ್ತಿದ್ದರೂ ಆತ ಭಾಡಿಗೆದಾರ ಎಂದು ಪ್ರಸ್ತು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

ಪ್ರತಿವಾದಿ ಮಾಸಿಕ ರೂ. **3,750/-**ಭಾಡಿಗೆ ನೀಡುತ್ತಿದ್ದಾರೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲಾ. ದಾವೆ ಮಾಡುವ ಪೂರ್ವದಲ್ಲಿ ನಾವು ದಾವಾ ಆಸ್ತಿಗೆ ಹೋಗಿ ತಕರಾರು ಮಾಡಿದ್ದೆವು ಎಂದರೆ ಸಾಕ್ಷಿ ಪ್ರತಿವಾದಿ ದಾವಾ ಆಸ್ತಿ ತನ್ನದು ಎಂದು ಹೇಳಿದ ಕಾರಣ ನಾವು ತಕರಾರು ಮಾಡಿದೆವು ಎಂದು ಹೇಳುತ್ತಾರೆ. ಪೋಲಿಸರನ್ನು ಸಹ ಸ್ಥಳಕ್ಕೆ ಕರೆಸಿದ್ದೆವು ಎಂದರೆ ನಿಜ.

**(ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ